ದಿನಾಂಕಃ 06.11.2025

ಅಸಲುದಾವಃ 101/2021

ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 4 ರಿಂದ 6 ನೇ ಪ್ರತಿವಾದಿ ಪರ ವಕೀಲರಿಂದಃ

ಭಾಗ ಕೇಳಿ ಪಂಚಾಯಿತಿ ಸೇರಿಸಿರುವುದಾಗಿ ಹೇಳಿದ್ದೀರಿ, ಆ ಸ್ಥಳ ಯಾವುದು ಎಂದರೆ ಸಾಕ್ಷಿ ನಾನು ಸೇರಿಸಿಲ್ಲ ನನ್ನ ತಾಯಿ ಪಂಚಾಯಿತಿ ಸೇರಿಸಿದ್ದು ಎಂದು ಉತ್ತರಿಸುತ್ತಾರೆ. ನನ್ನ ತಾಯಿ ಪಂಚಾಯಿತಿ ಸೇರಿಸಿದ್ದ ಸ್ಥಳ ನನಗೆ ಗೊತ್ತಿಲ್ಲ. ಆ ಪಂಚಾಯಿತಿಯಲ್ಲಿ ಯಾರು ಯಾರು ಸೇರಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ಪಂಚಾಯಿತಿಯಲ್ಲಿ ಏನು ತೀರ್ಮಾನವಾಯಿತು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನ್ಯಾಯ ತೀರ್ಮಾನವಾಗಲಿಲ್ಲ ಎಂದು ಮಾತ್ರ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಇತ್ತೀಚೆಗೆ 2 ನೇ ವಾದಿ ತೀರಿಕೊಂಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. 2 ನೇ ವಾದಿಯ ತಿಥಿ ಕಾರ್ಯವನ್ನು ನೀವು ಮತ್ತು ತಂದೆ ವಾಸ ಮಾಡುತ್ತಿರುವ ಮನೆಯಲ್ಲಿಯೇ ಒಟ್ಟಿಗೆ ಸೇರಿ ಮಾಡಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಪಾಲು ಪಟ್ಟಿ ಪ್ರಕಾರ ನಿಮ್ಮ ತಂದೆಗೆ, ಬಸವರಾಜು, ಚಂದ್ರಕುಮಾರ್, ಗೌರಮ್ಮ, ನಂದಿನಿ ಎಲ್ಲರಿಗೂ ಭಾಗವಾಗಿದ್ದು ಪ್ರತ್ಯೇಕವಾಗಿ ಖಾತೆ ಆಗಿದೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ 4 ರಿಂದ 6 ನೇ ಪ್ರತಿವಾದಿಗಳ ಮೇಲೆ ಕಾನೂನು ಬದ್ಧ ವಾರಸುದಾರರಲ್ಲ ಎಂದು ಯಾವುದಾದರು ಕೇಸು ಹಾಕಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ದಿನಾಂಕಃ 17.07.2013 ರ ಪಾಲು ಪಟ್ಟಿ ಪ್ರಕಾರ ವಿಭಾಗ ಮಾಡಿಕೊಂಡು ನಿಮ್ಮ ತಂದೆಯ ಭಾಗಕ್ಕೆ ಬಂದ ಸ್ವತ್ತಿನ ಖಾತೆಯನ್ನು ಮಾಡಿಸಿಕೊಂಡು ಸ್ವಾಧೀನದಲ್ಲಿ ಇದ್ದರೂ ಸಹ ಹೇಗಾದರು ಮಾಡಿ ಪ್ರತಿವಾದಿ 4 ರಿಂದ 6 ರವರ ಭಾಗಕ್ಕೆ ಬಂದಿರುವ ಸ್ವತ್ತನ್ನು ಕಬಳಿಸಬೇಕೆಂಬ ಉದ್ದೇಶದಿಂದ ನಿಮ್ಮನ್ನು ಎತ್ತಿ ಕಟ್ಟಿ ಸುಳ್ಳು ಕೇಸು ಹಾಕಿಸಿದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ಜೊತೆ ನೀವೂ ಸೇರಿ ನಿಮ್ಮ ತಂದೆಯ ಭಾಗಕ್ಕೆ ಬಂದಿದ್ದ ಸ್ವತ್ತುಗಳನ್ನು ಮಾರಾಟ ಮಾಡಿದ್ದರೂ ಸಹ ನಿಮ್ಮ ತಂದೆಯ ಮಾತನ್ನು ಕೇಳಿ ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ದಿನಾಂಕಃ17.07.2013 ರಂದು ಕುಟುಂಬದ ಸ್ವತ್ತುಗಳ ಕುರಿತಾಗಿ ಪಾಲು ಪಟ್ಟಿ

ಮೂಲಕ ಭಾಗ ಆಗಿರುವುದರಿಂದ ಯಾವುದೇ ಒಟ್ಟು ಕುಟುಂಬ ಈಗ ಅಸ್ತಿತ್ವದಲ್ಲಿಯೇ ಇಲ್ಲ ಎಂದರೆ ಸಾಕ್ಷಿ ಇಲ್ಲ, ಈಗಲೂ ಒಟ್ಟು ಕುಟುಂಬದಲ್ಲಿಯೇ ಇದ್ದೇವೆ ಎಂದು ಉತ್ತರಿಸುತ್ತಾರೆ. 4 ರಿಂದ 6 ನೇ ಪ್ರತಿವಾದಿಯರ ಸ್ವತ್ತನ್ನು ಕಬಳಿಸಬೇಕೆಂಬ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.